ದಿಃ13.01.2022 OS No.124/2017 PW-1

ದಿಃ13.01.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಕೆ.ಟಿ.ಟಿ. ವಕೀಲರಿಂದ

ನನ್ನ ಖಾಯಂ ವಿಳಾಸ ಚನ್ನಪಟ್ಟಣದ ಮಳೂರು ಟೌನ್. ನನಗೆ ಶಿವಕುಮಾರ್ ರವರು 25-30 ವರ್ಷದ ಪರಿಚಯವಿದೆ. ನನ್ನ ಸ್ನೇಹಿತರ ಮನೆಗೆ ಆಗಾಗ ಬುರುತ್ತಿದ್ದರು ಆಗ ಅವರು ನನಗೆ ಪರಿಚಯವಾದರು. ನನಗೂ ಮತ್ತು ಶಿವಕುಮಾರರವರ ಮಧ್ಯ ಮೊದಲಿಗೆ ಯಾವುದೇ ರೀತಿಯ ವ್ಯವಹಾರ ಇರುವುದಿಲ್ಲ. ಶಿವಕುಮಾರ್ ರವರು ವ್ಯವಸಾಯ, ಫ್ಯಾನಾನ್ಸ್ ಮತ್ತು ಚೀಟಿ ವ್ಯವಹಾರ ಮಾಡುತ್ತಿದ್ದರು ಮತ್ತು ಪಟ್ಟಣದಲ್ಲಿ ಒಳ್ಳೆಯ ವ್ಯಕ್ತಿಯಾಗಿದ್ದರು. ನಾನು ಶಿವಕುವಾರ್ ರವರ ಬಳಿ 2 ಸಲ ಚೀಟಿ ಹಾಕಿದ್ದೆ ಯಾವ ಇಸವಿಯಲ್ಲಿ ಹಾಕಿದ್ದೆ ಎಂದು ನೆನಪಿಲ್ಲ. ನಾನು ಮೊದಲಿಗೆ 1 ಲಕ್ಷ ರೂ ಆನಂತರದಲ್ಲಿ 2 ಲಕ್ಷ ಮೊತ್ತದ ಚೀಟಿ ಹಾಕಿದ್ದೆ. ಚೀಟಿ ಮುಗಿದ ನಂತರ ಶಿವಕುಮಾರ್ ರವರು ನನಗೆ ನಗದು ರೂಪದಲ್ಲಿ ಹಣವನ್ನು ನೀಡಿದ್ದರು.

ಅವರ ಬಗ್ಗೆ ನನಗೆ ಚನ್ನಾಗಿ ತಿಳಿದುಕೊಂಡಿದ್ದೆ. ಅವರು ದಿನಾಂಕಃ 21-09-2013 ರಂದು ಮನೆ ಬಿಟ್ಟು ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ಚನ್ನಪಟ್ಟಣದ ಪತ್ರಿಕೆಯಲ್ಲಿ ಪ್ರಕಟವಾಗಿತ್ತು ಎಂದರೆ ಸಾಕ್ಷಿಯವರು ಮೌನವಾಗಿದ್ದರು. ಇದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶಿವಕುಮಾರ ರವರನ್ನು 1 ವಾರದ ನಂತರ ಮನೆಗೆ ಕರೆದು ಕೊಂಡು ಬಂದರು ಎಂದರೆ ನನಗೆ ಗೊತ್ತಿಲ್ಲ. ಅವರು ವಾಪಸ್ ಬಂದ ನಂತರ ಎಲ್ಲಾ ವ್ಯವಹಾರ ನಿಲ್ಲಿಸಿದ್ದರು ಎಂದರೆ ನನಗೆ

ಗೊತ್ತಿಲ್ಲ. ಅವರು ಯಾತ್ತಕ್ಕಾಗಿ ವ್ಯವಹಾರವನ್ನು ನಿಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಮಾನಸಿಕವಾಗಿ ನೊಂದು ಅಸ್ವಸ್ಥರಾಗಿದ್ದರು ಎಂದರೆ ಸಾಕ್ಷಿಯು ಮೌನವಾಗಿದ್ದರು. ನಾನು ಕೆ.ಎಸ್.ಐ.ಸಿ.ದಿಂದ ದಿನಾಂಕಃ01-01-2004 ರಲ್ಲಿ ನಾನು ನಿವೃತ್ತಿ ಹೊಂದಿದ್ದೇನು. ನನಗೆ ನನ್ನ ಸಂಬಳ ಹೊರತು ಪಡಿಸಿ ಬೇರೆ ಯಾವುದೇ ವರಮಾನವಿರಲಿಲ್ಲ. ನಾನು ನಿವೃತ್ತಿಯಾದ ಸಮಯದಲ್ಲಿ ನನಗೆ 8,50,000/- ನಿವೃತ್ತಿಯಾದ ಹಣ ಬಂದಿತ್ತು. ಹಣ ನನ್ನ ಬ್ಯಾಂಕ್ ಅಕೌಂಟ್‌ಗೆ ಬಂದಿತ್ತು. ಆ ಹಣವನ್ನು ನನ್ನ ಮಕ್ಕಳ ವಿಧ್ಯಾಭ್ಯಾಸಕ್ಕಾಗಿ ವಿನಿಯೋಗಿಸಿದ್ದೆ. ನಾನು ನಿವೃತ್ತಿಯಾದ ಸಮಯದಲ್ಲಿ ಬಂದ ಹಣದಷ್ಟು ದೊಡ್ಡ ಮೊತ್ತದ ಹಣ ಬೇರೆ ಯಾವುದೇ ಹಣ ಬಂದಿರುವುದಿಲ್ಲ.

ನಾನು ಎಸ್.ಎಸ್.ಎಲ್.ಸಿ. ವರೆಗೆ ವ್ಯಾಸಂಗ ಮಾಡಿದ್ದೇನೆ ನನಗೆ ಇಂಗ್ಲೀಷ್ ಓದಲು ಅಷ್ಟಾಗಿ ಬರುವುದಿಲ್ಲ. ಶಿವಕುಮಾರ್ ರವರ ಜೀವಿತಕಾಲದಲ್ಲಿ ನನ್ನಿಂದ 3,00,000/- ರೂ ಯಾವ ದಿನಾಂಕದಂದು ಪಡೆದು ಕೊಂಡಿರುತ್ತಾರೆ. ಎಂದು ನಾನು ನನ್ನ ಮುಖ್ಯ ವಿಚಾರಣೆಯನ್ನಾಗಲಿ ಅಥವ ವಾದ ಪತ್ರದ್ದಲ್ಲಾಗಲಿ ನಮೂದಿಸಿಲ್ಲ. ನಾನು ನೊಟೀಸ್ ಕೊಡುವ ಮುಂಚೆ ಒಂದು ವರ್ಷದ ಹಿಂದೆ ಹಣವನ್ನು ಪಡೆದಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದಿಸಿದ್ದೇನೆ. ಆದರೆ ನೋಟೀಸ್ ನೀಡಿದ ದಿನಾಂಕ ನನಗೆ ನೆನಪಿರುವುದಿಲ್ಲ. ಸದರಿ ನೋಟೀಸ್ ನಿಪಿ-4 ದಿನಾಂಕಃ28-01-2016 ರಂದು ನೀಡಿದ್ದು, ಒಂದು ವರ್ಷದ ಹಿಂದೆ ಹಣವನ್ನು ನೀಡಿದ್ದೆ ಎಂದರೆ 2015 ರಲ್ಲಿ ನೀಡಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕಃ08-07-2014 ರಂದು ಶಿವಕುಮಾರ್ ರವರು ಮರಣ ಹೊಂದಿದ್ದಾರೆ

ಎಂದರೆ ಸರಿ. ದಿನಾಂಕ 21-09-2013 ರಿಂದ ಪ್ರತಿವಾದಿ ವಿಜಯಲಕ್ಷ್ಮಿರವರೇ ಚೀಟಿ ಮತ್ತು ಫೈನಾನ್ಸ್ ವ್ಯವಹಾರ ನೋಡಿಕೊಳ್ಳುತ್ತಿದರು. ನಾನು ಪ್ರತಿವಾದಿ ಬಳಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ನಾನು ಕೊಟ್ಟ 3 ಲಕ್ಷ ಹಣವನ್ನು ಅವರು ಯಾವುದಕ್ಕಾಗಿ ಕೇಳಿದರು ಎಂಬುದು ನನಗೆ ಗೊತ್ತಿಲ್ಲ. ಸದರಿ ಹಣಕ್ಕೆ ನಾನು ಯಾವುದೇ ಬಡ್ಡಿ ತೆಗೆದುಕೊಂಡಿಲ್ಲ. ಸದರ ಹಣವು ನನ್ನ ವಿ.ಆರ್.ಎಸ್ ನಲ್ಲಿ ಪಡೆದ ಹಣವಾಗಿತ್ತು. ಸದರಿ ಹಣವನ್ನು ನಾನು ಬ್ಯಾಂಕ್ ನಿಂದ ಯಾವ ದಿನಾಂಕದಂದು ಹಿಂಪಡೆದೆ ಎಂದು ನನಗೆ ನೆನಪಿಲ್ಲ.

ಚೆಕ್ ಮೂಲಕ ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಸಾಕ್ಷಿ ಮುಂದುವರೆದು ಶಿವಕುಮಾರ್ ರವರು ನಗದು ರೂಪದಲ್ಲಿ ಕೇಳಿದ್ದರು ಎಂದು ನುಡಿಯುತ್ತಾರೆ. ನಾನು ನನ್ನ ವಾದ ಪತ್ರದಲ್ಲಿ ಶಿವಕುಮಾರ್ ರವರು ನಗದು ರೂಪದಲ್ಲಿ ಹಣವನ್ನು ಕೇಳಿದ್ದರು ಎಂದು ಎಲ್ಲಿಯೂ ನಮೂದು ಮಾಡಿರುವುದಿಲ್ಲ. ಶಿವಕುಮಾರ್ ರವರಿಗೆ ಮಕ್ಕಳಿದ್ದು ಅವರು ಅವರ ವಾರಸುದಾರರು ಎಂದರೆ ಸರಿ. ಅವರ ವಾರಸುದಾರರ ಮೇಲೆ ಯಾವುದೇ ದಾವೆಯನ್ನು ಹೂಡಿರುವುದಿಲ್ಲ. ಶಿವಕುಮಾರ್ ರವರ ಹೆಂಡತಿ ಮಕ್ಕಳಿಗೆ ನೋಟೀಸ್ ನೀಡಿದ್ದೀರಾ ಎಂದರೆ ಸಾಕ್ಷಿ ಮುಂದುವರೆದು ಮೌಖಿಕವಾಗಿ ಹಲವು ಬಾರಿ ಕೇಳಿದ್ದೆ ಎಂದು ನುಡಿಯುತ್ತಾರೆ. ನಾನು ನನ್ನ ನೊಟೀಸ್ ನಲ್ಲಿ ಮೌಖಿಕವಾಗಿ ಕೇಳಿದ್ದರ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ.

ಹಣ ನೀಡುವುದರ ಬಗ್ಗೆ ಯಾವುದಾದರು ದಾಖಲೆ ಪಡೆದು ಕೊಂಡಿದ್ದೀರ ಎಂದರೆ ಸಾಕ್ಷಿ ರವರು ನನಗೆ ಒಂದು ಚೆಕ್ ನ್ನು ನೀಡಿದ್ದಾರೆ ಎಂದು ನುಡಿಯುತ್ತಾರೆ.

ನೋಟೀಸ್ ನಲ್ಲಾಗಲಿ, ವಾದ ಪತ್ರದ್ದಾಗಲಿ, ಪ್ರಮಾಣ ಪತ್ರದ್ದಾಗಲಿ ಶಿವಕುಮಾರ್ ರವರು ಸದರಿ ಹಣವನ್ನು ಇಂತಿಷ್ಟು ದಿನದಲ್ಲಿ ಮರುಪಾವತಿ ಮಾಡುವುದಾಗಿ ಹೇಳಿದರು ಎನ್ನುವ ವಿಚಾರವನ್ನು ನಾನು ನಮೂದು ಮಾಡಿರುವುದಿಲ್ಲ. ನಾನು ಚೆಕ್ ನ್ನು ಬ್ಯಾಂಕ್ ಗೆ ಹಾಜರು ಪಡಿಸಿಲ್ಲ. ಅವರು ಬದುಕಿದ್ದ ಕಾಲದಲ್ಲಿ ಸದರಿ ಚೆಕ್ ನ್ನು ನಾನು ಬ್ಯಾಂಕ್ ಗೆ ಹಾಜರು ಪಡಿಸಿರುವುದಿಲ್ಲ.

ಚೆಕ್ ನಲ್ಲಿ ಇರುವ ಬರವಣಿಗೆ, ಸಹಿ ಮತ್ತು ದಿನಾಂಕ ಬೇರೆ ಬೇರೆ ಆಗಿದೆ ಎಂದರೆ ಸರಿ. ಶಿವಕುಮಾರ್ ರವರು 2005 ರಲ್ಲಿಯೇ ವಿಜಯ ಬ್ಯಾಂಕ್ ವವಹಾರವನ್ನು ನಿಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲ. ಶಿವಕುಮಾರ್ ರವರು ನನಗೆ ಯಾವುದೇ ಚೆಕ್ ನೀಡಿಲ್ಲ ಮತ್ತು ಅವರ ಸಹಿ ಅಲ್ಲ ಎಂದರೆ ಸುಳ್ಳು.

ದಿನಾಂಕಃ 28-01-2016 ರಂದು ನೋಟೀಸ್ ನೀಡಿದ್ದು ದಾವೆಯನ್ನು ದಿನಾಂಕಃ 29-05-2017 ರಂದು ಹೂಡಿರುತ್ತೀರಿ ಎಂದರೆ ಸರಿ. ಹಣ ಪಾವತಿಸಿದ ಬಗ್ಗೆ ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ, ಆದರೆ ಚೆಕ್ ಅವರೇ ನೀಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಹಣವನ್ನು ನಾನು ಬ್ಯಾಂಕ್‌ನಿಂದ ಹಿಂಪಡೆದಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ. ನಾನು 3 ಲಕ್ಷ ರೂ ಸಾಲ ನೀಡುವ ಶಕ್ತಿ ನನಗೆ ಇಲ್ಲ ಎಂದರೆ ಸುಳ್ಳು. ನಾನು 2004 ರಂದು ನಿವೃತ್ತಿ ಹೊಂದಿದ ದಿನದಿಂದ 2014 ರವರೆಗೂ ನನ್ನ ಖಾತೆಯಲ್ಲಿ ಹಣ ಇತ್ತು ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಶಿವಕುಮಾರ್ ರವರು ನನಗೆ ಹಣ ಕೊಡುವ ವಿಚಾರವಾಗಿ, ಅವರ ವಿರುದ್ದ ಮರಣ ನಂತರ ದಾವೆಯನ್ನು ಹಾಕುವುದಕ್ಕೆ ನನಗೆ ಯಾವುದೇ ತೊಂದರೆ ಇರಲಿಲ್ಲ.

ದಿನಾಂಕಃ 09-05-2014 ರಿಂದ 3 ವರ್ಷ ದೊಳಗೆ ದಾವೆಯನ್ನು ಹೂಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನೀವು ಶಿವಕುಮಾರ್ ರವರಿಗೆ ಹಣ ನೀಡಿಲ್ಲ ಆದ್ದರಿಂದ ನೀವು ಅವರ ಮರಣ ನಂತರ ಅವರಿಗೆ ನೋಟೀಸ್ ನೀಡಲಿಲ್ಲ ಎಂದರೆ ಸರಿ.

ನಾನು ಹಣ ನೀಡುವ ಸಮಯದಲ್ಲಿ ಯಾರು ಇರಲಿಲ್ಲ. ಚೆಕ್ ನ್ನು ತಿದ್ದುಪಡಿ ಮಾಡಿ ಸುಳ್ಳು ದಾವೆಯನ್ನು ಹಾಕಿದ್ದೀರಿ ಎಂದರೆ ಸುಳ್ಳು. ಶಿವಕುಮಾರ್ ರವರು ಚೆಕ್‌ನ್ನು ನೀಡಿಲ್ಲ ಎಂದರೆ ಸುಳ್ಳು. ಶಿವಕುಮಾರ್ ರವರಿಗೆ ನೀವು ಯಾವುದೇ ಹಣ ನೀಡಿಲ್ಲ ಹಾಗಾಗಿ ಪ್ರತಿವಾದಿ ನಿಮಗೆ ಹಣವನ್ನು ನೀಡಬೇಕಾಗಿಲ್ಲ ಎಂದರೆ ಸುಳ್ಳು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.